

# ಬೆಂದರೆ ತಿಂದರೆ ಆನೆಯ ಬಲ

## ಚಿತ್ರ - ಬರಹ: ಸತ್ಯನಾರಾಯಣ ಪಿ.ಎಸ್

ಮಲೆನಾಡಿನ ಮಳೆಕಾಡಿನ ಬೆಂದರೆಬಳ್ಳಿಯ ಗೆಡ್ಡೆ ತಾಕತ್ತಿನ ತಾಣ ಎಂಬುದು ನಮಗಿಂತ ಮೊದಲೇ ಅಮೆರಿಕೆಯ ಮೂಲಿಕೆ ಮಾರಾಟಗಾರ ಗ್ಯಾರಿ ಎಂಡ್ ಸನ್‌ಗೆ ತಿಳಿದಿದ್ದು ಹೇಗೆ? ನಮ್ಮಲ್ಲಿ ಮನುಷ್ಯರೇ ಇನ್ನೂ ಅರಿತಿರದ ಈ ಗೆಡ್ಡೆಯ ಅಮೆರಿಕೆ ಬೆಲೆ ಗೊತ್ತೆ? ಪೌಂಡ್ ಗೆ ಕೇವಲ 17.50 ಡಾಲರ್. ಅಂದರೆ ಕಿಲೊಗೆ ರೂ. 2,350 ರಷ್ಟು!

ಸರ್, ಬೇಗ ಫೊಟೊ ತೆಗೀರಿ, ಭಾರ ತಡೆಯೋಕಾಗ್ತಿಲ್ಲ ಎಂದು ಭಾಗ್ಯಳದು ಒಂದೇ ರಾಗ. ಸುಮಾರು ಹತ್ತುಕಿಲೊ ತೂಗುವ ಎರಡು ಭಾರಿ ಗೆಡ್ಡೆ ಆಕೆ ಹೊತ್ತು ನಿಂತಿದ್ದಳು. ವಿಶ್ವಖ್ಯಾತಿಯುಳ್ಳ ಮಲೆನಾಡಿನ ಸಾಗರ ಪರಿಸರದ ಏಕಮೂಲಿಕೆ ತಜ್ಞ ನಾರಾಯಣ ಮೂರ್ತಿ ಬೆದ್ರೆ ಎಂದು ಗುರುತಿಸಿದ ಆ ಬಳ್ಳಿ ಬುಡದ ನೆಲದಡಿಯ ಗೆಡ್ಡೆ ಗಾತ್ರ ಕಂಡು ಬೆರಗಾದೆವು. ಆರೆರೆ ಮರಾಠಿಯ

ಬೆಂದರೆವೆಲ್ ನಮ್ಮವರ ಬೆದ್ರೆಬಳ್ಳಿ ಆಯಿತಲ್ಲ ಎನಿಸಿತು. ಬೆದ್ರೆ ಶಬ್ದದ ಮೂಲ ಹುಡುಕಿದರೆ ತಕ್ಷಣ ಹೊಳೆಯಿತು.

ಥೇಟ್ ಮುತ್ತುಗದೆಲೆ ಹೋಲುವ ಎಲೆ. ಅದೇ ಕುಲ ಬಂಧು ಬೆದ್ರೆ. ಭಾರಿ ಬಳ್ಳಿ ನೆಲ ಬಿಟ್ಟು ಗಿಡ, ಮರ ಪೊದೆ ಹುಡುಕಹೊರಡುತ್ತದೆ. ಅಸರೆ ಪಡೆಯುತ್ತದೆ. ಒಂದಡಿ ಉದ್ದನೆ ಹೂ ಗೊಂಚಲು. ನೀಲಿ ಹೂ. ಅವರೆ ಕಾಯಿ ಗಿಂತ ಉದ್ದನೆ ಕಾಯೊಳಗೆ ಚಪ್ಪಟೆ 5-6 ಬೀಜ ಸಾಲು. ಎಲೆ ಉದುರಿದಾಗ ಬರಿ ಕಾಯಿ. ಆಗ ಗೆಡ್ಡೆಗಾತ್ರ ಗರಿಷ್ಟ. ಎಳೆ ಗೆಡ್ಡೆ ಬಹುಕಾಲ ಬಾಳೀತು. ಬಲಿತದ್ದು ಕೆಡುವುದು ಬೇಗ. ಗರಿಷ್ಟ ವ್ಯಾಸ ಸುಮಾರು ಒಂದರಿಂದ ಎರಡಡಿಯ ಗೆಡ್ಡೆ ಸಹಿತ ಇರುವುದಿದೆ. ನದಿ ಕಾಲುವೆ ಬದಿಯ ಫಲವತ್ತು ಮಣ್ಣಲ್ಲಿ ವಿದಾರಿ ಬೆಳೆ ಸಮೃದ್ಧ.



ಸರಲ್, ಸುರಾಲ್ ಎಂಬ ಹೆಸರಿನ ತರಕಾರಿಯಾಗಿ ಹರಿದ್ವಾರದಲ್ಲಿ ಮಾರಾಟಗೊಳ್ಳುವ ಬೆದ್ರೆ ಬಗ್ಗೆ ನಮ್ಮ ರಾಜ್ಯದ ಜನ ಇದುವರೆಗೆ ತಲೆ ಕೆಡಿಸಿಕೊಂಡಿಲ್ಲ. ಈಗೀಗ ತರಕಾರಿ ತೀರ ದುಬಾರಿಗೊಳ್ಳುತ್ತಿರುವ ದಿನಗಳಲ್ಲಿ ಇಂತಹ ಕಂದ ಮೂಲಗಳ ಬಗ್ಗೆ ತಿಳಿದಿರುವುದು ತರವಲ್ಲವೇ?

ಗಜವಾಜಿಪ್ರಿಯಾ ಎಂಬ ಹೆಸರಿನ ವಿದಾರಿ ಆನೆ,ಕುದುರೆ ಪ್ರಾಣಿಗಳ ತ್ರಾಣ ವರ್ಧಿಸಲು ಹಿಂದೆ ಬಳಕೆಯಲ್ಲಿತ್ತು. ಅಷ್ಟೇ ಅಲ್ಲ. ಹಾಲೂಡುವ ತಾಯಂದಿರಿಗೆ ಇದು ಮಹದುಪಕಾರಿ. ಹಸಿ ಅಥವಾ ಬೆಂದ ಗೆಡ್ಡೆ ಬಡಿಸಿರಿ.ಎದೆ ಹಾಲು ವರ್ಧಕ. ಮೂತ್ರ

ತೊಂದರೆಗೆ ಸಹ ವಿದಾರಿ ಬಳಕೆ ಗುಣಕಾರಿ. ಕೀಲುನೋವಿಗೆ ಅರೆದು ಲೇಪ ಹಾಕುವ ಮಾಹಿತಿ ಇದೆ. ಸಿಹಿ ರಸದ ಗೆಡ್ಡೆ ಅತಿ ತಿಂದರೆ ಅಪಾಯ ಇಲ್ಲ. ಒಂದರೆಡು ಬಾರಿ ವಾಂತಿ ಆದೀತು.



ಏಕೆಂದರೆ ಇದು ಜೇಷ್ಟಮಧುವಿನಂತೆ ಅತಿ ಸಿಹಿ. ರಾಜ್ಯದ ರಬ್ಬರ್ ತೋಟಗಳ ಮಣ್ಣಿನ ಸವಕಳಿ ತಡೆವ ತದ್ರೂಪಿ ಬಳ್ಳಿಯ ದ್ವಿನಾಮ ಪ್ಯುರೆರಿಯ ಜವಾನಿಕಾ. ವಿದಾರಿಯ ಹೆಸರು ಪ್ಯುರೆರಿಯಾ ಟ್ಯುಬರೋಸ. ವಾಸ್ತವವಾಗಿ ಎರಡೂ ಬಳ್ಳಿ ಸಹ ಗೆಡ್ಡೆ ಉಳ್ಳವು. ವಿದಾರಿ ಕಾಡು ಗೆಡ್ಡೆ. ಕುಡ್ಜೂ ಎಂಬ ಆಂಗ್ಲ ಹೆಸರಿನ ಈ ಗೆಡ್ಡೆ ಮಾತ್ರ ಬಳಕೆ ಅಲ್ಲ. ಎಲೆ ಸಹ ಜಾನುವಾರಿಗೆ ಉತ್ತಮ ಮೇವು. ಇಂಥಹ ಉಪಕಾರಿ ಬಳ್ಳಿ ಬೆಳೆಸಲು ಬೀಜ ಅಥವಾ ಬಲಿತ ಗೆಡ್ಡೆ ಸಾಕು. ಒಂದು ಬೇರಿನಡಿ ಒಂದೇ ಗೆಡ್ಡೆ ಅಷ್ಟೇ ಅಲ್ಲ. ಹಲವು ಗಡ್ಡೆ ಇರಬಹುದು. ಗರಿಷ್ಟ ಪಿಷ್ಟ ಉಳ್ಳ ಈ ಗೆಡ್ಡೆ ಬರಗಾಲದ ಆಹಾರ ಮಾತ್ರ ಅಲ್ಲ. ಆಯುರ್ವೇದ ಪ್ರಕಾರ ಆನೆಯ ಬಲಕೊಡುವ ತಾಕತ್ತಿನ ಟಾನಿಕ್. ಇಂತಹ ಅಮೂಲ್ಯ ಸಸ್ಯ ವೈವಿಧ್ಯ ಇಂದು ಜನಗಣನೆಗೆ ಬಾರದೆ ತೆರೆಮರೆಗೆ ನಮ್ಮ ನಡುವಿಂದ ಮಾಯವಾಗುತ್ತಿವೆ. ಆದರೆ ಅವುಗಳ ಬಳಕೆ ಮಾಹಿತಿ ಮಾತ್ರ ಅಲ್ಲ. ಅವುಗಳನ್ನೇ ನಾವು ಹೊಂದಿದ್ದೇವೆ. ಇವು ನಮ್ಮ ದೇಶದ ಜೈವಿಕ ಸಂಪನ್ಮೂಲ. ಇವುಗಳ ರಕ್ಷಣೆ ಹಾಗು ಸುಸ್ಥಿರ ಬಳಕೆಯತ್ತ ನಾವು ಯೋಚಿಸಬೇಕಾಗಿದೆ. ಇಲ್ಲವಾದರೆ ವಿದಾರಿಯಂತಹ ನೂರಾರು ದಾರಿ ಬದಿಯ ಗಿಡ ಗಂಟಿಗಳು, ಅವುಗಳ ಕುರಿತಾದ ಲಿಖಿತ ಮಾಹಿತಿ ಮತ್ತು ಮೌಖಿಕ ಮುಂದಿನ ಪೀಳಿಗೆಗೆ ದೊರಕದೆ ಹೋಗುವ ಅಪಾಯವಿದೆ.

***